#67



## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ಎಲ್ ಬೋಜೇಗೌಡ ಇವರು ನಿಯಮ 330 ರ ಮೇರೆಗೆ ಪ್ರಸ್ತಾಪಿಸಿರುವ ಸಾರ್ವಜನಿಕ ಮಹತ್ವದ ವಿಷಯಕ್ಕೆ ಸರ್ಕಾರದ ಉತ್ತರ

ವಿಷಯ:

**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಅಧಿಸೂಚನೆ ಸಂಖ್ಯೆ: ಸಿಆಸುಇ 657 ಸೆನೆನಿ 2018 ದಿನಾಂಕ:20.05.2020 ರ ಆದೇಶದಲ್ಲಿ ನಿಯಮ 10 ಕ್ಕೆ ತಿದ್ದುಪಡಿ ತಂದು "ಯಾವುದೇ ಸೇವೆ ಅಥವಾ ಹುದ್ದೆಯ ನೇಮಕಾತಿಗೆ ರೂಪಿಸಿರುವ ವಿಶೇಷ ನೇಮಕಾತಿ ನಿಯಮಗಳಲ್ಲಿ ಇರುವ ಅವಕಾಶಗಳಲ್ಲಿ ಏನೇ ಹೇಳಿದ್ಯಾಗ್ಯೂ ಸದರಿ ನೇಮಕಾತಿ ನಿಯಮಗಳಲ್ಲಿ ನೇರ ನೇಮಕಾತಿಯನ್ನು ನೇಮಕಾತಿಯ ಒಂದು ವಿಧಾನವಾಗಿ ನಿಗಧಿ ಪಡಿಸಿದ್ದಲ್ಲಿ ನೇಮಕಾತಿ ಪ್ರಾಧಿಕಾರಕ್ಕೆ ಅಭ್ಯರ್ಥಿಗಳ ವಿದ್ಯಾರ್ಹತೆ, ಆದಾಯ ಮತ್ತು ಜಾತಿ ಪ್ರಮಾಣ ಪತ್ರಗಳು ನೈಜ ಮತ್ತು ಸಿಂಧುವಾಗಿದೆ ಎಂದು ದೃಢಪಡದ ಹೊರತು ಯಾವುದೇ ವ್ಯಕ್ತಿಯನ್ನು ಯಾವುದೇ ಸೇವೆ ಅಥವಾ ಹುದ್ದೆಗೆ ನೇಮಕ ಮಾಡತಕ್ಕದ್ದಲ್ಲ" ಎಂದು ಆದೇಶ ಮಾಡಲಾಗಿರುತ್ತದೆ. ಆದರೆ ಇತರೆ ಮೀಸಲಾತಿ ಪ್ರಮಾಣ ಪತ್ರಗಳಾದ ಗ್ರಾಮೀಣ ಮೀಸಲಾತಿ ಬಗ್ಗೆ ಏನು ಹೇಳಿರುವುದಿಲ್ಲ. ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರದ ಸಿಂಧುತ್ವವನ್ನು ದೃಡಪಡದೆ ನೇಮಕಾತಿ ಮಾಡುವುದು ಸರಿಯಾದ ಕ್ರಮವಾಗಿರುವುದಿಲ್ಲ ಆದ್ದರಿಂದ ಇದನ್ನು ಸೇರಿಸಿ ಆದೇಶ ಹೊರಡಿಸುವ ಸಂಬಂಧ ಸದನದಲ್ಲಿ ಪ್ರಸ್ತಾಪಿಸಬಯಸುತ್ತೇನೆ.**

**ಸರ್ಕಾರದ ಉತ್ತರ:**

ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರ ನಿಯಮ 10 ಕ್ಕೆ ದಿನಾಂಕ 20.05.2020 ರ ಅಧಿಸೂಚನೆ ಸಂಖ್ಯೆ: ಸಿಆಸುಇ 657 ಸೆನೆನಿ 2018 ರಲ್ಲಿ ಭಾಗಶ: ತಿದ್ದುಪಡಿ ಮಾಡಿ ಈ ಕೆಳಗೆ ಉದ್ಧರಿಸಿದಂತೆ ಉಪಬಂಧವನ್ನು ಪ್ರತಿಸ್ಥಾಪಿಸಲಾಗಿದೆ:

> "Notwithstanding anything contained in the rules of recruitment specially made in respect of any service or post, if in such rules of recruitment, direct recruitment is prescribed as one of the methods of recruitment's, no person shall be appointed to any service or post unless the appointing authority is satisfied that the certificates pertaining to qualifications, income and caste etc., of the candidates are true and valid and"

ಮೇಲ್ಕಂಡ ತಿದ್ದುಪಡಿಯನ್ವಯ ಪ್ರತಿಸ್ಥಾಪಿಸಲಾದ ಉಪಬಂಧದಲ್ಲಿ "unless the appointing authority is satisfied that the certificates pertaining to qualifications, income and caste etc., of the candidates are true and valid...." ಎಂಬ ಪದಪುಂಜಗಳನ್ನು ಸೇರಿಸಲಾಗಿರುತ್ತದೆ. ಅದರಂತೆ, ಅಭ್ಯರ್ಥಿಯ ವಿದ್ಯಾರ್ಹತೆ, ಆದಾಯ, ಜಾತಿ ಇತ್ಯಾದಿ ಪ್ರಮಾಣ ಪತ್ರಗಳ ನೈಜತೆಯನ್ನು ಮತ್ತು ಸಿಂಧುತ್ವವನ್ನು ಖಚಿತಪಡಿಸಿಕೊಳ್ಳದ ಹೊರತು, ನೇಮಕಾತಿ ಪ್ರಾಧಿಕಾರವು ಅಭ್ಯರ್ಥಿಯ ನೇಮಕಾತಿ ಮಾಡಿಕೊಳ್ಳುವಂತಿಲ್ಲ. ಈ ಉಪಬಂಧದಲ್ಲಿ ಉಲ್ಲೇಖಿಸಿರುವ ಪ್ರಮಾಣ ಪತ್ರಗಳು ಕೇವಲ ಉದಾಹರಣಾತ್ಮಕವಾಗಿರುತ್ತವೆ. ಅವುಗಳು ವಿವರಣಾತ್ಮಕವಾಗಿ ಇರುವುದಿಲ್ಲ. ಉದಾಹರಣಾತ್ಮಕವಾಗಿ ನಮೂದಿಸಿರುವ ಪ್ರಮಾಣ ಪತ್ರಗಳಲ್ಲಿ ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರವೂ ಒಳಗೊಂಡಂತೆ ಅಭ್ಯರ್ಥಿಯು ನೇಮಕಾತಿ ಬಯಸಿ ಅರ್ಜಿ ಸಲ್ಲಿಸಿದಾಗ, ಅರ್ಜಿಯ ಜೊತೆಯಲ್ಲಿ ಲಗತ್ತಿಸಬೇಕಾದ / ಲಗತ್ತಿಸಲಾದ ಇತರೆ ಎಲ್ಲಾ ಪ್ರಮಾಣ ಪತ್ರಗಳು ಸೇರಿರುತ್ತವೆ. ಆದುದರಿಂದ, ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರದ ನೈಜತೆ ಮತ್ತು ಸಿಂಧುತ್ವವನ್ನು ನೇಮಕಾತಿ ಪ್ರಾಧಿಕಾರವು ಖಚಿತಪಡಿಸಿಕೊಳ್ಳತಕ್ಕದ್ದೆಂದು ಗೊತ್ತುಪಡಿಸಲು ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರ ನಿಯಮ 10ಕ್ಕೆ ಹೆಚ್ಚುವರಿಯಾಗಿ ತಿದ್ದುಪಡಿ ಮಾಡುವ ಅಗತ್ಯತೆ ಇರುವುದಿಲ್ಲ.

**ಸಂಖ್ಯೆ: ಸಿಆಸುಇ 418 ಸೆನೆನಿ 2024**

(ಸಿದ್ದರಾಮಯ್ಯ)
ಮುಖ್ಯಮಂತ್ರಿ